ನಿಮ್ಮ ಮೊಬೈಲ್ ಫೋನುಗಳನ್ನು ಆಫ್ ಮಾಡಿ'' ವಿಜ್ಞಾಪನೆಯಲ್ಲಿ 'ಮೊಬೈಲ್' ಎಂಬ ಪದದ ಉಚ್ಚಾರದಲ್ಲಿ 'ಮೊ' ಮೇಲೆ ಕೊಟ್ಟ ಒತ್ತು ಪಕ್ಕಾ ಕೊಂಕಣಿ ಧಾಟಿಯದು ಎಂದೊಮ್ಮೆ ನಾನು ಹೇಳಿದಾಗ ಕೊಂಕಣಿಯಲ್ಲಿ ''ವ್ಹೈವೆ?'' (ಹೌದೆ?) ಎಂದು ನಕ್ಕರು.

ಬಹಳ ಹಿಂದೆ ದೂರದರ್ಶನದಲ್ಲಿ ಕೆಲವು ಮಹತ್ವದ ಪ್ರಾದೇಶಿಕ ನಾಟಕಗಳು ಹಿಂದಿಯಲ್ಲಿ 'ಟೆಲಿ ಪ್ಲೇ' ಆಗಿ ಬಿತ್ತರಗೊಳ್ಳುತ್ತಿದ್ದವು. ಅದರಲ್ಲಿ ಕೀರ್ತಿನಾಥ ಕುರ್ತಕೋಟಿ ಅವರ 'ಆ ಮನಿ' ನಾಟಕವನ್ನು 'ವೋ ಘರ್' ಅಂತ ಕಾರ್ನಾಡರು ನಿರ್ದೇಶಿಸಿದ್ದರು. ಒಂದು ಮನೆಯಲ್ಲಿ ಮಕ್ಕಳು 'ಮನೆಯ ಆಟ' ಆಡುವ ನಾಟಕ ಅದು. ಮಕ್ಕಳೇ ಹಿರಿಯರಂತೆ ವರ್ತಿಸುವ, ಆದರೆ ಆ ಮುಗ್ಧ ಆಟದಲ್ಲೂ ಸಂಸಾರದ ಅಪಸ್ವರಗಳೆಲ್ಲ ಆ ಮುಗ್ಧತೆಯಿಂದಾಗಿಯೇ ಇನ್ನೂ ಮೊನಚಾಗಿ ಧ್ವನಿಸುವ ಅಪೂರ್ವ ಪ್ರಯೋಗ ಅದು. ನಾಟಕದ ಕೊನೆಯಲ್ಲಿ ಸೊಸೆಯ ಪಾತ್ರ ವಹಿಸಿದ ಪುಟ್ಟಿ ಓಡಿ ಬಂದು ಬಾವಿಯಲ್ಲಿ ನಿಜಕ್ಕೂ ಹಾರಿಕೊಂಡು ಬಿಡುತ್ತಾಳೆ! ಬದುಕು, ನಾಟಕ, ಸತ್ಯ, ಆಟ–ಗಳ ದಾರುಣ ಎರಕದ ಅಂಥ ಪರಿಣಾಮಕಾರಿ ಅಂತ್ಯವನ್ನು ನಾನು ಇನ್ನೆಲ್ಲೂ ಕಂಡಿಲ್ಲ! ಅದು ಎಬ್ಬಿಸಿದ ಶೂನ್ಯದ ಅಲೆಯೊಂದು ನನ್ನಲ್ಲಿ ಈಗಲೂ ಜಾಗೃತವಾಗಿಯೇ ಇದೆ.

ಒಮ್ಮೆ ನನ್ನ ಪುಸ್ತಕದ ಪ್ರತಿಯೊಂದನ್ನು ಕೊಡಲು ಗೆಳೆಯನೊಂದಿಗೆ ಅವರಲ್ಲಿಗೆ ಹೋಗಿದ್ದೆ. ಮನೆಯಲ್ಲಿ ಅವರು ನಿಂತಲ್ಲಿ, ಕೂತಲ್ಲಿ, ಅಡ್ಡಾಡುವಲ್ಲಿ ಮಕ್ಕಳಂತೆ ಎಷ್ಟೊಂದು ಪುಸ್ತಕಗಳು! ಓದಿನ ನಾನಾ ಹಂತದಲ್ಲಿರುವ ಪುಸ್ತಕಗಳು! ಇತಿಹಾಸ, ಸಮಾಜಶಾಸ್ತ್ರ, ವಿಜ್ಞಾನ, ಮಾನವಿಕಶಾಸ್ತ್ರ, ಪುರಾಣ, ಜನಪದ, ಸಂಗೀತ – ಎಷ್ಟೊಂದು ವಿಷಯಗಳ ಎಷ್ಟೊಂದು ಹೊಸ ಪುಸ್ತಕಗಳು. ಮಾನವೀಯ ಆಸಕ್ತಿಯ ಸೂಕ್ಷ್ಮ ಸ್ವಾಧ್ಯಾಯಿ! ಎಂಥ ಆಪ್ತರೇ ಕರೆದರೂ ಕಾರ್ಯಕ್ರಮ ಇತ್ಯಾದಿಗಳಿಗೆ ಭಿಡೆ, ಮುಲಾಜು ಗಿಲಾಜು ಇಲ್ಲದೆ 'ಆಗುವುದಿಲ್ಲ' ಎಂದು ಹೇಳುವ ನಿಷ್ಠುರವಾದಿ. ಒಪ್ಪಿಕೊಂಡರೆ ಕೇವಲ ಹತ್ತು – ಹದಿನೈದು ನಿಮಿಷದ ಒಳಗೆ ಹೇಳಬೇಕಾದುದನ್ನು ನಿಖರವಾಗಿ, ಚೊಕ್ಕವಾಗಿ ಮಾತಾಡಿ ಕೂತುಬಿಡುವ ಕನ್ನಡದ ಬಹುಶಃ ಏಕಮೇವ ಸಾಹಿತಿ. (''ಸಂಭಾವಿತ ಪ್ರೇಕ್ಷಕರು ಸಿಕ್ಕಾರಂತ ಶೋಷಣೆ ಮಾಡಬಾರ್ದು'' – ಅವರದೇ ಉವಾಚ).

ಕೆಲವು ತಿಂಗಳ ಹಿಂದೆ ಧಾರವಾಡದಿಂದ ಬಂದಿದ್ದ ಕುರ್ತಕೋಟಿ ಅವರ ಸೊಸೆ ನರ್ಮದಾ ಅವರ ಸಂಗಡ ಕಾರ್ನಾಡರ ಮನೆಗೆ ಹೋಗಿದ್ದೆ. (ಯಾವಾಗಲೂ ಒಬ್ಬನೇ ಹೋಗಲು ಅಳುಕು. ಸರಿಯಾಗಿ ಅಭ್ಯಾಸ ಮಾಡದಿದ್ದವನು ಮಾಸ್ತರರ ಬಳಿ ಹೋದ ಹಾಗೆ). ಆಗ ಅವರ ಸುರಕ್ಷೆಗೆಂದು ಹೊರಗೆ ಕೂತಿದ್ದ 'ಗನ್‌ಮ್ಯಾನ್' ಬಗ್ಗೆ ಎಷ್ಟೊಂದು ಕಳಕಳಿಯಿದ ಮಾತನಾಡಿದರು. ''ಪಾಪ, ಇಡೀ ದಿನ ಶೂನ್ಯದಲ್ಲಿ ಕೂತಿರ್ತಾನೆ ಆತ. ಓದಲು ಕೊಟ್ರೆ ಓದುವಂತಿಲ್ಲ. ಗೆಳೆಯರನ್ನು ಕರೆದು ಹರಟೆ ಹೊಡೆಯುವಂತಿಲ್ಲ. ಎಂಥಾ ಏಕತಾನದ ಏಕಾಂಗಿ ಕಾಯಕ.''

ನನಗೊಮ್ಮೆ ಕೀಟಲೆಯ ಇ–ಮೇಲ್ ಕಳಿಸಿದ್ದರು: ''ಕರ್ನಾಟಕದಲ್ಲಿ ನಿನ್ನ ಹಾಡುಗಳು ಕೇಳಿಬರದ ಪ್ರಶಾಂತವಾದ ಜಾಗವು ಎಲ್ಲಾದರೂ ಇದ್ದರೆ ತಿಳಿಸು.'' ಅಂತ. ಅದಕ್ಕೆ ನಾನು ತಕ್ಷಣ – ''ಇದೆ. ಅದು ನಮ್ಮ ಮನೆ. ಇಲ್ಲಿ ನನ್ನ ಹಾಡು ಎಂದೂ ಕೇಳಿಸುವುದಿಲ್ಲ. ದಯವಿಟ್ಟು ಬನ್ನಿ.'' – ಎಂದು ಉತ್ತರಿಸಿದೆ. ಇಡೀ ಸಮಾಜವನ್ನೇ ವಾತ್ಸಲ್ಯದಿಂದ ಖಾಸಗಿಯಾಗಿಸಿಕೊಂಡ ಈ ಮೇಧಾವಿಯಲ್ಲಿ ಅಂತರಂಗ, ಬಹಿರಂಗ ಎಂಬ ಒಡಕೇ ಇರಲಿಲ್ಲ. ಹೀಗಾಗಿ ಈತ ಖಾಸಗಿಯಾಗಿ ಮಾತಾಡಿದ್ದು ಸಹಜವಾಗೇ ಸಾರ್ವಜನಿಕವಾಗಿರುತ್ತಿತ್ತು. ಸಾರ್ವಜನಿಕವಾಗಿ ಮಾತಾಡುವುದೂ ಒಂದು ಖಾಸಗೀ ಕೌಟುಂಬಿಕತೆಯಲ್ಲಿರುತ್ತಿತ್ತು. ನಾಟಕಗಳು, ಸಿನಿಮಾ ಇವಿಷ್ಟನ್ನೇ ಇಟ್ಟುಕೊಂಡರೆ ನಮಗೆ ಪೂರ್ತಿ ಸಿಗದ ಕಾರ್ನಾಡ್, ಅವರ ಕಥನೇತರ ಬರವಣಿಗೆಯಲ್ಲಿ ('ಆಗೊಮ್ಮೆ ಈಗೊಮ್ಮೆ', 'ಮೆಲುಕು' – ಮನೋಹರ ಗ್ರಂಥಮಾಲೆ) ಮತ್ತು ಆತ್ಮಕಥನ (ಆಡಾಡತ ಆಯುಷ್ಯ)ದಲ್ಲಿ ಒಂದು ಕಾಲಖಂಡದ ಸಾಕ್ಷಿಪ್ರಜ್ಞೆಯಂತೆ ಅಗಾಧವಾಗಿ ಆವರಿಸಿ ಮೂಡಿ ನಿಲ್ಲುತ್ತಾರೆ. ಅವರ ಈ ಗದ್ಯವೇ